**CC No.2937/2019**
**CW:18**
**PW: 09**

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿ.ಜೆ.ಎಂ. ರವರ ನ್ಯಾಯಾಲಯ, ಧಾರವಾಡ.**

**ಸಿಸಿ ನಂಃ 2937/019**

| | | |
|---|---|---|
| ಸಾಕ್ಷಿದಾರರ ಹೆಸರು | : | ಬಸವರಾಜ ಅಂಗಡಿ |
| ತಂದೆಯ ಹೆಸರು | : | ಮಲ್ಲಿಕಾರ್ಜುನಪ್ಪ |
| ವಯಸ್ಸು | : | 64 ವರ್ಷ |
| ಉದ್ಯೋಗ | : | ನಿವೃತ್ತ ಎ ಎಸ್ ಐ |
| ವಾಸ ಸ್ಥಳ | : | ಧಾರವಾಡ . |

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ 14.08.2026.**

**ಮುಖ್ಯ ವಿಚಾರಣೆ:ಮಾನ್ಯ ಹಿಸಸಅ ರವರಿಂದ ಃ**

ನಾನು ದಿನಾಂಕ 15.01.2017 ರಿಂದ 31.03.2022 ರವೆರೆಗೆ ವಿದ್ಯಾಗಿರಿ ಠಾಣೆಯಲ್ಲಿ ಎ.ಎಸ್.ಐ.ಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

ನಾನು ದಿನಾಂಕ 02.06.2019 ರಂದು ರಾತ್ರಿ 11.00 ಗಂಟೆಗೆ ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ 1 ರವರು ಠಾಣೆಗೆ ಹಾಜರಾಗಿ ಟೈಪ್ ಮಾಡಿಸಿದ ದೂರನ್ನು ನೀಡಿದ್ದು ಸದರಿ ದೂರನ್ನು ನಾನು ಪಡೆದುಕೊಂಡು ಪ್ರಕರಣವನ್ನು ಸಿ ಆರ್ ನಂ. 86/2019 ರಂತೆ ದಾಖಲಿಸಿ ಪ್ರ.ವ.ವ.ನ್ನು ತಯಾರಿಸಿ ಮೂಲ ಪ್ರತಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಪ್ರತಿಗಳನ್ನು ನನ್ನ ಮೇಲಾಧಿಕಾರಿಗಳಿಗೆ ಸಲ್ಲಿಸಿದೆನು. ಈಗ ನಾನು ನೋಡುತ್ತಿರುವ ನಿಪಿ-4 ಸದರಿ ದೂರು ಆಗಿರುತ್ತದೆ ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು. , ಪ್ರ.ವ.ವ.ನ್ನು ನಿಪಿ-22 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-

22(ಎ) ಎಂದು ಗುರುತಿಸಲಾಯಿತು. ಪ್ರಕರಣವು ಘೋರ ಪ್ರಕರಣ ಆಗಿದ್ದರಿಂದ ಮುಂದಿನ ತನಿಖೆಯನ್ನು ಚಾಸಾ-19 ರವರಿಗೆ ವರ್ಗಾಯಿಸಿರುತ್ತೇನೆ.

**ಪಾಟೀ ಸವಾಲು ಃ ಆರೋಪಿತರ ಪರ ವಕೀಲರಿಂದ ಃ**

1. ದೂರನ್ನು ಠಾಣೆಯಲ್ಲಿ ಬರೆಯಿಸಿರುತ್ತಾರೆ. ಚಾಸಾ-1 ರವರಿಗೆ ಓದಲು ಹಾಗೂ ಬರೆಯಲು ಬರದಿದ್ದು ನಾವು ಠಾಣೆಯಲ್ಲಿ ಪ್ರಕರಣಕ್ಕೆ ಅನುಕೂಲವಾಗುವಂತೆ ದೂರನ್ನು ತಯಾರಿಸಿರುತ್ತೇವೆ ಅಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗದೆ ಠಾಣೆಯಲ್ಲೇ ಪಂಚನಾಮೆ ತಯಾರಿಸಿ ಚಾಸಾ-2 ಮತ್ತು 3 ರವರ ಸಹಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಠಾಣೆಯಲ್ಲಿದ್ದ ಬೇವಾರೀಸ್ ಎಂ ಓ 1 ಮತ್ತು 2 ಅನ್ನು ಈ ಪ್ರಕರಣದಲ್ಲಿ ಅಳವಡಿಸಿರುತ್ತೇನೆ ಅಂದರೆ ಸರಿಯಲ್ಲ. ಚಾಸಾ-4 ರಿಂದ 6 ರವರ ಹೇಳಿಕೆಗಳನ್ನು ಮತ್ತು ಚಾಸಾ-1 ರವರ ಮರು ಹೇಳಿಕೆಯನ್ನು ಪಡೆದುಕೊಳ್ಳದೇ ಇದ್ದರೂ ಪಡೆದುಕೊಂಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ನೋಟೀಸ್ ನೀಡಿ ಠಾಣೆಗೆ ಹಾಜರುಪಡಿಸಿಕೊಂಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತನಿಖಾ ಕಾಲಕ್ಕೆ ಆರೋಪಿತರು ಮತ್ತು ಚಾಸಾ-1 ರವರ ನಡುವೆ ಚಾಲ್ತಿಯಲ್ಲಿದ್ದ ಓ.ಎಸ್. 381/2022 ಮತ್ತು 351/2022 ದಾವೆಗಳ ಬಗ್ಗೆ ನಾನು ತನಿಖೆ ಮಾಡಿರುವುದಿಲ್ಲ. ಆರೋಪಿತರು ಯಾವುದೇ ಅಪರಾಧ ಮಾಡದೇ ಇದ್ದರೂ ಚಾಸಾ-1 ರವರಿಗೆ ಅನುಕೂಲವಾಗಲೆಂದು ನಾನೇ ಸುಳ್ಳು ಪ್ರಕರಣ

ದಾಖಲಿಸಿ ಸುಳ್ಳು ಅಂತಿಮ ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವಂತೆ ಗಾಯದ ಪ್ರಮಾಣ ಪತ್ರವನ್ನು ತಯಾರಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸರಿಯಾಗಿ ತನಿಖೆ ಮಾಡದೇ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಲಯದಲ್ಲಿ ಬೆರಳಚ್ಚುಗಾರರು ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸ. ಇದೆ.**

**3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.**